## ದಿನಾಂಕ: 14–06–2012 ರಂದು ತೋಟಗಾರಿಕೆ ಸ್ಥಾಯಿ ಸಮಿತಿ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಉದ್ಯಾನವನಗಳ ಅಭಿವೃದ್ಧಿ ಮತ್ತು ನಿರ್ವಹಣೆ ಹಾಗೂ ಕೆರೆಗಳ ಅಭಿವೃದ್ಧಿ ಕಾಮಗಾರಿಗೆ ಸಂಬಂಧಪಟ್ಟಂತೆ ನಡೆದ ಸಭೆಯ ನಡವಳಿಗಳು

| ಹಾಜರಿದ್ದ ಸದಸ್ಯರು<br>ಶ್ರೀಯುತರಾದ : | | | ಹಾಜರಿದ್ದ ಅಧಿಕಾರಿಗಳು<br>ಶ್ರೀಯುತರಾದ | |
|---|---|---|---|---|
| 1 | **ಶ್ರೀ.ವೈ.ಎನ್.ಅಶ್ವಥ್** | ಅಧ್ಯಕ್ಷರು | 1 | ಕಾರ್ಯಪಾಲಕ ಅಭಿಯಂತರರು(ಕೆರೆಗಳು–1, 2, ಮತ್ತು 3) |
| 2 | ಶ್ರೀ.ಎನ್.ಚಂದ್ರಶೇಖರ್‌ರಾಜು | ಸದಸ್ಯರು | 2 | ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ (ಪರಿಸರ ಕೋಶ–ಕೆರೆಗಳು) |
| 3 | ಶ್ರೀ.ಎಂ.ಸಿ.ಶ್ರೀನಿವಾಸ್ | | 3 | ಸಹಾಯಕ ಕಾರ್ಯಪಾಲಕ ಅಭಿಯಂತರರು (ಜಾಹೀರಾತು) |
| 4 | ಶ್ರೀಮತಿ.ಶಕುಂತಲ.ಎನ್ | ಸದಸ್ಯರು | 4 | ಸಹಾಯಕ ಕಾರ್ಯಪಾಲಕ ಅಭಿಯಂತರರು (ಕೆರೆಗಳು) |
| 5 | ಶ್ರೀಮತಿ.ನಂದಿನಿ.ಕೆ | ಸದಸ್ಯರು | 5 | ತೋಟಗಾರಿಕೆ ಅಧೀಕ್ಷಕರು – (ಪೂರ್ವ /ಪಶ್ಚಿಮ /ದಕ್ಷಿಣ–1 ಮತ್ತು 2/ ದಾಸರಹಳ್ಳಿ/ ಬೊಮ್ಮನಹಳ್ಳಿ/ ಯಲಹಂಕ/ ಮಹದೇವಪುರ/ ರಾಜರಾಜೇಶ್ವರಿನಗರ) |
| 6 | ಶ್ರೀಮತಿ.ಲಕ್ಷ್ಮಿ | ಸದಸ್ಯರು | | |
| 7 | ಶ್ರೀ.ಎಸ್.ಗಂಗಾಧರ್ | ಸದಸ್ಯರು | | |
| 8 | ಶ್ರೀಮತಿ.ಸೀಮಾ ಖಾನಂ | ಸದಸ್ಯರು | | |
| 9 | ಶ್ರೀ.ಎಮ್.ಶಿವರಾಜು | ಸದಸ್ಯರು | | |
| 10 | ಶ್ರೀ.ತಿಮ್ಮರಾಜು | ಸದಸ್ಯರು | | |

**(ಹಿಂದಿನ ಸಭೆಯ ನಡವಳಿಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)**

ಮಾನ್ಯ ಅಧ್ಯಕ್ಷರು ಸಭೆಯ ಅಧ್ಯಕ್ಷತೆ ವಹಿಸಿ ಸಭೆಯಲ್ಲಿ ಹಾಜರಿದ್ದ ಸಮಿತಿ ಸದಸ್ಯರು ಹಾಗೂ ಅಧಿಕಾರಿಗಳಿಗೆ ಹೃತ್ಪೂರ್ವಕವಾದ ಸ್ವಾಗತ ಕೋರುತ್ತಾ, ವಲಯವಾರು ಉದ್ಯಾನವನಗಳ ನಿರ್ವಹಣೆ ಹಾಗೂ ಅಭಿವೃದ್ಧಿಗೆ ಸಂಬಂಧಪಟ್ಟಂತೆ ಹಿಂದಿನ ಸಭೆಯಲ್ಲಿ ಸಮಿತಿಯು ಕೋರಿರುವ ವಿವರಗಳಿಗೆ ಮಾಹಿತಿಗಳನ್ನು ಅಧಿಕಾರಿಗಳು ನಿಗಧಿತ ಸಮಯದಲ್ಲಿ, ಪೂರ್ಣ ಪ್ರಮಾಣದಲ್ಲಿ ಒದಗಿಸದೇ ಇರುವ ಬಗ್ಗೆ ಅಸಮಾಧಾನ ವ್ಯಕ್ತಪಡಿಸುತ್ತಾ, ಸಮಿತಿಯು ಕೋರಿರುವ ಮಾಹಿತಿಯನ್ನು ವಿಳಂಬಕ್ಕೆ ಅಸ್ಪದನೀಡದಂತೆ ಜರೂರಾಗಿ ಸಮಿತಿಗೆ ಒದಗಿಸಲು ಸೂಚಿಸಿದರು.

ಮುಂದುವರೆದಂತೆ, ಅಧ್ಯಕ್ಷರು ಅಧಿಕಾರಿಗಳನ್ನು ಉದ್ದೇಶಿಸಿ, ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಕೆರೆಗಳು ಹಾಗೂ ಅವುಗಳಲ್ಲಿ ಅಭಿವೃದ್ಧಿಪಡಿಸಲಾಗುತ್ತಿರುವ ಹಾಗೂ ಪ್ರಗತಿಯಲ್ಲಿರುವ ಕೆರೆಗಳ ಕಾಮಗಾರಿ ವಿವರಗಳ ಬಗ್ಗೆ ಚರ್ಚಿಸಿದರು.

ಪಾಲಿಕೆ ವಶದಲ್ಲಿ 55 ಕೆರೆಗಳಿದ್ದು, ಅವುಗಳಲ್ಲಿ 5 ಕೆರೆಗಳು ಬಹಳ ಹಿಂದೆಯೇ ಅಭಿವೃದ್ಧಿಗೊಂಡಿದ್ದು, 12 ಕೆರೆಗಳಲ್ಲಿ ನೀರು ನಿಲ್ಲುವ ಹಾಗೆ ಮಾಡಲಾಗಿದೆ ಹಾಗೂ ಕಾಮಗಾರಿಗಳು ಪ್ರಗತಿಯಲ್ಲಿರುವುದಾಗಿ ತಿಳಿಸಿದರು. 33 ಕೆರೆಗಳಿಗೆ ಡಿಪಿಆರ್ ಮಾಡಬೇಕು, ಎಲ್.ಡಿ ಅಪ್ರೂವ್ ಕೊಟ್ಟ ನಂತರ ಟೆಂಡರ್ ಕರೆಯಬೇಕೆಂದು ಅಧಿಕಾರಿಗಳು ತಿಳಿಸಿದರು.

ಅಧ್ಯಕ್ಷರು ಮಾತನಾಡುತ್ತಾ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ಸಮಗ್ರವಾಗಿ ಅಭಿವೃದ್ಧಿಗೊಳಿಸುತ್ತಿರುವ ಕೆರೆಗಳು ಹಾಗೂ ಪಾಲಿಕೆ ವತಿಯಿಂದ ಸಮಗ್ರವಾಗಿ ಅಭಿವೃದ್ಧಿಗೊಳಿಸುತ್ತಿರುವ ಕೆರೆಗಳ ವಿವರ ಹಾಗೂ ಕೆರೆಗಳನ್ನು ಒತ್ತುವರಿ ಮಾಡಿಕೊಂಡಿರುವ ವಿಸ್ತೀರ್ಣ ಮತ್ತು ತೆರವುಗೊಳಿಸಿರುವ ವಿವರಗಳ ಬಗ್ಗೆ ಮಾಹಿತಿ ನೀಡುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಮುಂದುವರೆದಿದೆ. . . . .

82 ಎಕರೆ ಕೆರೆ ಒತ್ತುವರಿ ಜಾಗವನ್ನು ತೆರವುಗೊಳಿಸಿದ್ದು, 65 ಎಕರೆ ಒತ್ತುವರಿ ಜಾಗದಲ್ಲಿ ಬಿಲ್ಡಿಂಗ್ಸ್, ಅಪಾರ್ಟ್‌ಮೆಂಟ್ಸ್, ಶಾಲೆಗಳಿದ್ದು, ಅವರುಗಳು ನ್ಯಾಯಾಲಯದಿಂದ ಸ್ಟೇ ತಂದಿದ್ದು, ಪ್ರಕರಣಗಳು ನ್ಯಾಯಾಲಯದಲ್ಲಿ ಇತ್ಯರ್ಥಗೊಂಡ ನಂತರ ಒತ್ತುವರಿಯನ್ನು ತೆರವುಗೊಳಿಸಲಾಗುವುದೆಂದು ತಿಳಿಸಿದರು.

ಅಧ್ಯಕ್ಷರು, ಖಾಸಗಿ ಸಂಸ್ಥೆಯವರು ಕೆರೆಗಳನ್ನು ಅಭಿವೃದ್ಧಿಗೊಳಿಸುತ್ತಿರುವ ಬಗ್ಗೆ ವಿವರಗಳನ್ನು ನೀಡುವಂತೆ ಸೂಚಿಸಿದರು. ಯಾವುದೇ ಕೆರೆಗಳನ್ನು ಖಾಸಗಿ ಸಂಸ್ಥೆಯವರಿಗೆ ನೀಡಿರುವುದಿಲ್ಲವೆಂದು ಅಧಿಕಾರಿಗಳು ತಿಳಿಸಿದರು.

**ಅಧ್ಯಕ್ಷರು** ಉದ್ಯಾನವನಗಳ ನಿರ್ವಹಣೆ ಬಗ್ಗೆ ಅಧಿಕಾರಿಗಳೊಂದಿಗೆ ಚರ್ಚಿಸುತ್ತಾ, ಉದ್ಯಾನವನಗಳಲ್ಲಿ ಯಾವುದೇ ಕಾರಣಕ್ಕೂ ಗಿಡಗಳು ಒಣಗಿಹೋಗದಂತೆ ಕಾಪಾಡುವಂತೆ ಅಧಿಕಾರಿಗಳಿಗೆ ಸೂಚಿಸುತ್ತಾ, ಖಾಸಗಿಯವರು ನಿರ್ವಹಿಸುತ್ತಿರುವ ಉದ್ಯಾನವನಗಳ ನಿರ್ವಹಣೆಯ ಅವಧಿಯನ್ನು ಮುಂದುವರೆಸಬೇಕಾದಲ್ಲಿ ಸಮಿತಿಯ ಗಮನಕ್ಕೆ ತಂದು ಮುಂದುವರೆಸುವಂತೆ ಸೂಚಿಸಿದರು.

**<u>ಶ್ರೀ.ಓಂ.ಪ್ರಕಾಶ್,</u>** ತೋಟಗಾರಿಕೆ ಅಧೀಕ್ಷಕರು(ರಾಜರಾಜೇಶ್ವರಿನಗರ) : ಸಮಿತಿಯಿಂದ ಅಪ್ರೂವ್ ಅಗಿರುವ ಕಡತಗಳಿಗೆ ಕೋಡ್ ಅಗಿಲ್ಲ, ಜಾಬ್ ಕೋಡ್ ನೀಡುವ ವಿಷಯಕ್ಕೆ ಸಂಬಂಧಪಟ್ಟ ಹಾಗೆ ಮಾನ್ಯ ಆಯುಕ್ತರು ಒಂದು ಸುತ್ತೋಲೆಯನ್ನು ಹೊರಡಿಸಿದ್ದು, ಅದರಲ್ಲಿ ವಿಧಿಸಿರುವ ಷರತ್ತಿನ ಪ್ರಕಾರ ಜಾಬ್ ಕೋಡ್ ಅಪ್ರೂವ್ ಮಾಡಿಸಿಕೊಳ್ಳಲು ತುಂಬಾ ತೊಂದರೆಯಾಗಿದ್ದು, ಉದ್ಯಾನವನಗಳಲ್ಲಿ ಬೋರ್‌ವೆಲ್‌ಗಳು ನಿರ್ವಹಣೆ ಇಲ್ಲದೆ ಹಾಳಾಗಿ ಚಿಂತಾಜನಕವಾಗಿದೆ. ಗುತ್ತಿಗೆದಾರರ ಗುತ್ತಿಗೆ ಅವಧಿ ಮುಕ್ತಾಯಗೊಂಡಿದ್ದರೂ ಸಹ ನಿರ್ವಹಣೆಗೆ ಬಿಲ್ ಪಾವತಿಸಿಕೊಡುವುದಾಗಿ ವಿನಂತಿಸಿಕೊಂಡು ಮುಂದುವರೆಸಲಾಗುತ್ತಿದ್ದು, ಇತ್ತೀಚೆಗೆ ಅವರುಗಳು ಸಹ ಪ್ರತಿಕ್ರಿಯಿಸುತ್ತಿಲ್ಲವಾದ್ದರಿಂದ, ಉದ್ಯಾನವನದಲ್ಲಿ ಗಿಡಗಳು ಒಣಗಿಹೋಗುತ್ತಿದ್ದು, ಪರ್ಯಾಯ ವ್ಯವಸ್ಥೆ ಕಲ್ಪಿಸದಿದ್ದರೆ, ಸುಸ್ಥಿತಿಯಲ್ಲಿರುವ ಉದ್ಯಾನವನಗಳು ಹಾಳಾಗುವುದರಲ್ಲಿ ಸಂಶಯವಿಲ್ಲವೆಂದು ತಿಳಿಸಿ, ಬೋರ್‌ವೆಲ್ ದುರಸ್ಥಿ ಕಾರ್ಯವನ್ನು ತ್ವರಿತವಾಗಿ ಮಾಡಿಸಲು ವ್ಯವಸ್ಥೆ ಮಾಡಬೇಕೆಂದು ಕೋರಿದರು ಮತ್ತು ತೋಟಗಾರಿಕೆ ಅಧೀಕ್ಷಕರುಗಳಿಗೆ ಯಾವುದೇ ವಾಹನ ಸೌಲಭ್ಯವನ್ನು ಒದಗಿಸಿರುವುದಿಲ್ಲವೆಂದು, ಪಾಲಿಕೆಗೆ ಹೊಸದಾಗಿ ಸೇರ್ಪಡೆಯಾಗಿರುವ ವಲಯಗಳು ತುಂಬಾ ದೂರವಿರುವುದರಿಂದ, ಉದ್ಯಾನವನಗಳ ತಪಾಸಣೆಗೆ ಹೋಗಿ ಬರಲು ತುಂಬಾ ಸಮಯ ಬೇಕಾಗುತ್ತದೆ ಹಾಗೂ ಕಛೇರಿ ಕೆಲಸ ಕಾರ್ಯಗಳು ವಿಳಂಬವಾಗುತ್ತದೆಂದು, ಬೇಸಿಗೆ ಕಾಲದಲ್ಲಿ ನಾಲ್ಕೈದು ಬಾರಿ ಉದ್ಯಾನವನಗಳ ತಪಾಸಣೆ ಮಾಡಬೇಕಾಗಿದ್ದು, ವಾಹನಗಳಿಲ್ಲದೆ ತೊಂದರೆಯಾಗಿದೆ ಈ ಬಗ್ಗೆ ಹಿಂದೆ ಇದ್ದ ಅಧ್ಯಕ್ಷರಲ್ಲಿಯೂ ಸಹ ಮನವಿ ಮಾಡಲಾಗಿದೆಯೆಂದು ತಿಳಿಸಿದರು.

**<u>ಶ್ರೀ.ಎಮ್.ಶಿವರಾಜು,</u>** ಸದಸ್ಯರು ಮಾತನಾಡುತ್ತಾ, ಪಾಲಿಕೆ ವ್ಯಾಪ್ತಿಯ ಉದ್ಯಾನವನಗಳು ಸದಾ ಹಸಿರಿನಿಂದ ಕಂಗೊಳಿಸಬೇಕು. ಉದ್ಯಾನವನಗಳಲ್ಲಿ ದುರಸ್ಥಿಯಲ್ಲಿರುವ ಬೋರ್‌ವೆಲ್‌ಗಳನ್ನು ರಿಪೇರಿ ಮಾಡಿಸಲು ಕೂಡಲೇ ಕ್ರಮ ತೆಗೆದುಕೊಳ್ಳಬೇಕಾದ ನಿಟ್ಟಿನಲ್ಲಿ ಬೋರ್‌ವೆಲ್ ನಿರ್ವಹಣೆಗೆ ಸಂಬಂಧಪಟ್ಟಂತೆ ಕೋಡ್ ನೀಡುವ ವಿಷಯದಲ್ಲಿ ಮಾರ್ಪಾಡು ಮಾಡಲು ಆಯುಕ್ತರಿಗೆ ಪತ್ರ ಮುಖೇನ ಮನವಿ ಸಲ್ಲಿಸುವಂತೆ ಅಧ್ಯಕ್ಷರಿಗೆ ಕೋರಿದರು.

ಮುಂದುವರೆದಿದೆ. . . . .

**ಅಧ್ಯಕ್ಷರು** ಮಾತನಾಡುತ್ತಾ, ಚರ್ಚಿಸಿರುವ ವಿಷಯಗಳಿಗೆ ಸಂಬಂಧಪಟ್ಟಂತೆ, ಸಮಿತಿಯಿಂದ ಆಯುಕ್ತರಿಗೆ ಪತ್ರ ಬರೆಯಲಾಗುವುದೆಂದು ತಿಳಿಸುತ್ತಾ, ಉದ್ಯಾನವನಗಳನ್ನು ಖಾಸಗಿ ಸಂಸ್ಥೆಯವರು ನಿರ್ವಹಣೆ ಮಾಡುತ್ತಿದ್ದರೆ, ಅವರುಗಳು ಉದ್ಯಾನವನದಲ್ಲಿ ಯಾವುದೇ ರೀತಿಯ ಜಾಹೀರಾತು ಫಲಕವನ್ನು ಪ್ರಕಟಿಸಿದ್ದಲ್ಲಿ, ಜಾಹೀರಾತು ಶುಲ್ಕವನ್ನು ಪಾಲಿಕೆಗೆ ಪಾವತಿಸಿಕೊಂಡು, ಸದರಿ ಸಂಸ್ಥೆಯವರಿಗೆ ಉದ್ಯಾನವನವನ್ನು ಅಭಿವೃದ್ಧಿ ಮತ್ತು ನಿರ್ವಹಣೆಗೆ ನೀಡಲು ಸೂಚಿಸಿದರು.

ಸಮಿತಿಯ ಮುಂದಿರುವ ವಿಷಯಗಳ ಬಗ್ಗೆ ಅಧ್ಯಕ್ಷರು, ಸಮಿತಿಯ ಸದಸ್ಯರು ಹಾಗೂ ಅಧಿಕಾರಿಗಳೊಂದಿಗೆ ಚರ್ಚಿಸಿ, ಈ ಕೆಳಕಂಡಂತೆ ತೀರ್ಮಾನವನ್ನು ತೆಗೆದುಕೊಳ್ಳಲಾಯಿತು.

## 1. <u>ವಿಷಯ ಸಂಖ್ಯೆ:ತೋ/ಸ್ಥಾ/ಸ/10 /12-13, ದಿನಾಂಕ: 18-05-2012</u>

ಸನ್ಮಾನ್ಯ ಮುಖ್ಯಮಂತ್ರಿರವರು ಇತ್ತೀಚೆಗೆ ಸಾರ್ವಜನಿಕರಿಗೆ ಸ್ಥಳದಲ್ಲಿಯೇ ಸಾರ್ವಜನಿಕ ಕುಂದು ಕೊರತೆಗಳ ನಿವಾರಣೆ ಮಾಡಿ ತಕ್ಷಣ ಸ್ಪಂದಿಸಲು ಅನುಕೂಲವಾಗುವಂತೆ ಜನಸ್ನೇಹಿ ಚೌಕಿಯನ್ನು ವಿಂಡ್ಸರ್ ಮ್ಯಾನರ್ ವೃತ್ತದ ಬಳಿ ಸನ್ಮಾನ್ಯ ಮುಖ್ಯಮಂತ್ರಿಗಳ ನಿವಾಸ ''**ಅನುಗ್ರಹ**''ದ ಕಡೆ ಹೋಗುವ ರಸ್ತೆಯ ಮಧ್ಯದಲ್ಲಿ ನಿರ್ಮಾಣ ಮಾಡಿ, ಹೈಗ್ರೌಂಡ್ಸ್ ಪೋಲೀಸ್ ಠಾಣೆಯ ಸಿಬ್ಬಂದಿಗಳು ಕಾರ್ಯ ನಿರ್ವಹಿಸುತ್ತಿದ್ದು, ಚೌಕಿಯ ಹಿಂದೆ ಮತ್ತು ಮುಂದೆ ಸ್ವಲ್ಪ ಸ್ಥಳಾವಕಾಶವಿದ್ದು ವಾಹನಗಳಿಂದ ಆಕಸ್ಮಿಕವಾಗಿ ಆಗುವ ಅಪಘಾತಗಳನ್ನು ತಡೆಯುವ ಹಾಗೂ ಸುಗಮ ಸಂಚಾರದ ಹಿತದೃಷ್ಠಿಯಿಂದ, ಸದರಿ ಸ್ಥಳದ ಸುತ್ತಲೂ ಸಿಮೆಂಟ್ ಸ್ಲ್ಯಾಬ್ ಹಾಕಿ ಹೂವಿನ ಕುಂಡಗಳನ್ನು ಹಾಗೂ ಹುಲ್ಲಿನ ಲಾನ್‌ನ್ನು ಅಭಿವೃದ್ಧಿಪಡಿಸಿ ಶೃಂಗಾರಗೊಳಿಸಲು ಮೆ॥ಐಟಿಸಿ ವಿಂಡ್ಸರ್ ಮ್ಯಾನರ್ ಮ್ಯಾನೇಜ್‌ಮೆಂಟ್‌ರವರು ಒಪ್ಪಿರುವ ಹಿನ್ನೆಲೆಯಲ್ಲಿ ಸದರಿ ಕಾರ್ಯವನ್ನು ಕೈಗೊಳ್ಳಲು ಪಾಲಿಕೆ ವತಿಯಿಂದ ಅನುಮತಿ ನೀಡಲು ಕೋರಿರುತ್ತಾರೆ.

ಆದುದರಿಂದ, ಪಾಲಿಕೆ ವತಿಯಿಂದ ಮೂರು ವರ್ಷಗಳ ಕಾಲಾವಧಿಗೆ ಅನುಮತಿ ನೀಡುವ ಕುರಿತು, ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಅನುಮೋದನೆ ಕೋರಿ ಮಂಡಿಸಲಾದ ಮಾನ್ಯ ಆಯುಕ್ತರ ದಿನಾಂಕ: 18-04-2012 ರ ಟಿಪ್ಪಣಿ.

**<u>ನಿರ್ಣಯ:-</u>** **ದಿನಾಂಕ: 18-04-2012 ರ ಮಾನ್ಯ ಆಯುಕ್ತರ ಟಿಪ್ಪಣಿಯನ್ನು ಸಮಿತಿಯು ಒಪ್ಪುತ್ತಾ, ಯಾವುದೇ ರೀತಿಯ ಜಾಹೀರಾತು ಫಲಕವನ್ನು ಪ್ರಕಟಿಸಿದ್ದಲ್ಲಿ, ಜಾಹೀರಾತು ಶುಲ್ಕವನ್ನು ಪಾಲಿಕೆಗೆ ಪಾವತಿಸಿಕೊಂಡು, ಸದರಿ ಸಂಸ್ಥೆಯವರಿಗೆ ಉದ್ಯಾನವನವನ್ನು ಅಭಿವೃದ್ಧಿ ಮತ್ತು ನಿರ್ವಹಣೆಗೆ ನೀಡಲು ಸಮಿತಿಯು ತೀರ್ಮಾನಿಸಿತು.**

## 2. <u>ವಿಷಯ ಸಂಖ್ಯೆ:ತೋ/ಸ್ಥಾ/ಸ/11/12-13, ದಿನಾಂಕ: 18-05-2012</u>

ಅರಣ್ಯ ಸಂರಕ್ಷಣಾಧಿಕಾರಿ, ಬಿ.ಬಿ.ಎಂ.ಪಿ. ರವರು, ಯಲಹಂಕ ವಲಯದ ದೊಡ್ಡಬೊಮ್ಮಸಂದ್ರ ಕೆರೆಯ ಹಂತ-1ರ ಅಭಿವೃದ್ಧಿ ಕಾಮಗಾರಿಯ ಅಂದಾಜು ಮೊತ್ತ **ರೂ.385.30** ಲಕ್ಷಗಳಿಗೆ ಕಾಮಗಾರಿ ಕೈಗೆತ್ತಿಕೊಳ್ಳುವ ಮುನ್ನ ಪೂರ್ವಬಾವಿ ಸಿದ್ಧತೆಗಾಗಿ ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ಪ್ರಕ್ರಿಯೆ ನಡೆಸಲು ಅನುಮೋದನೆಗಾಗಿ ಸಲ್ಲಿಸಿರುತ್ತಾರೆ.

ಮುಂದುವರೆದಿದೆ. . . . .

ಸದರಿ ಕಾಮಗಾರಿಗಾಗಿ ದಿನಾಂಕ:27-12-2011ರ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಿಷಯದ ಸಂಖ್ಯೆ.**3(278)/2011-12** ರಂದು ಕೌನ್ಸಿಲ್ ಸಭೆಯಿಂದ ಆಡಳಿತಾತ್ಮಕ ಅನುಮೋದನೆ ಹಾಗೂ ಕಾಮಗಾರಿ ಸಂಕೇತ ಪಡೆಯುವ ಸಲುವಾಗಿ ಅನುಮೋದನೆ ಪಡೆಯಲಾಗಿದೆ.

ದೊಡ್ಡಬೊಮ್ಮಸಂದ್ರ ಕೆರೆಯ ಅಭಿವೃದ್ಧಿಗಾಗಿ ರೂ.**436.00**ಲಕ್ಷಗಳಿಗೆ ವಿವರವಾದ ಯೋಜನಾ ವರದಿ(ಡಿ.ಪಿ.ಆರ್.)ಯನ್ನು ತಯಾರಿಸಲಾಗಿದ್ದು, ಮೊದಲ ಹಂತದ ಕಾಮಗಾರಿಯಲ್ಲಿ ಕೆರೆಯ ಅಭಿವೃದ್ಧಿ, ಏರಿ ಅಭಿವೃದ್ಧಿಪಡಿಸುವುದು, ಸಿಲ್ಟ್‌ಟ್ರಾಪ್ ಅಭಿವೃದ್ಧಿ, ಲೀಡ್ ಡ್ರೈನ್ ಅಭಿವೃದ್ಧಿ, ಕೊಳಚೆ ನೀರಿನ ತಿರುವು ಗಾಲುವೆ, ವಿಗ್ರಹ ವಿಸರ್ಜನೆಗಾಗಿ ಕಲ್ಯಾಣಿ ನಿರ್ಮಾಣ, ಒಳಹರಿವು ಹಾಗೂ ಹೊರ ಹರಿವು ಅಭಿವೃದ್ಧಿ, ಶೌಚಾಲಯ, ಕಾವಲುಗಾರರ ಕೊಠಡಿ, ಎಂ.ಎಸ್. ಗ್ರಿಲ್‌ಗೇಟ್, ಕರ್ಬ್ ಸ್ಟೋನ್ ಇತ್ಯಾದಿಗಳನ್ನು ಒಳಗೊಂಡಂತೆ ಕಾಮಗಾರಿಗಳನ್ನು ನಿರ್ವಹಿಸುವುದು ಅವಶ್ಯಕವಿರುತ್ತದೆ.

ಈ ಬಗ್ಗೆ ಸ್ಥಳೀಯ ಪಾಲಿಕೆ ಸದಸ್ಯರು ಕೆರೆಯನ್ನು ಅಭಿವೃದ್ಧಿಪಡಿಸಿ ಕೆರೆಗೆ ನೀರು ಬರುವಂತೆ ಒಳಹರಿವು ಅಭಿವೃದ್ಧಿಪಡಿಸಿ ಕೆರೆಯಲ್ಲಿ ನೀರು ನಿಲ್ಲುವಂತೆ ಮಾಡಿದಲ್ಲಿ, ಸುತ್ತಮುತ್ತಲ ಕೊಳವೆ ಬಾವಿಗಳಲ್ಲಿ ಅಂತರ್ಜಲ ಹೆಚ್ಚಾಗಿ ನೀರಿನ ಬವಣಿ ಕಡಿಮೆಯಾಗುವುದೆಂದು ಹಾಗೂ ಸಾರ್ವಜನಿಕರಿಗಾಗಿ ಜಾಗಿಂಗ್ ಪಾತ್ ನಿರ್ಮಿಸಲು ಕೋರಿರುತ್ತಾರೆ.

ಸದರಿ ಕಾಮಗಾರಿಗಾಗಿ 2012-13ನೇ ಸಾಲಿನ ಆಯವ್ಯಯದಲ್ಲಿ ಹೊಸಕೆರೆಗಳ ಅಭಿವೃದ್ಧಿ **ಪಿ-2175** ರ ಲೆಕ್ಕ ಶೀರ್ಷಿಕೆಯಡಿಯಲ್ಲಿ ರೂ.436.00 ಲಕ್ಷಗಳ ಅನುದಾನ ಅನುವು ಮಾಡಿಕೊಳ್ಳಲಾಗಿದೆ.

ಈ ಹಿನ್ನೆಲೆಯಲ್ಲಿ ಅಂದಾಜು ಮೊತ್ತ ರೂ.385.30 ಲಕ್ಷಗಳಿಗೆ ಸದರಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳುವ ಮುನ್ನ ಪೂರ್ವಬಾವಿ ಸಿದ್ಧತೆಗಾಗಿ ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ಪ್ರಕ್ರಿಯೆ ನಡೆಸಲು (ಟೆಂಡರ್ ಆಹ್ವಾನಿಸಲು) ಅನುಮೋದನೆ ಕೋರಿ, ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಮಾನ್ಯ ವಿಶೇಷ ಆಯುಕ್ತರು(ಯೋಜನೆ) ರವರ ದಿನಾಂಕ: 08-05-2012 ರ ಟಿಪ್ಪಣಿ.

**<u>ನಿರ್ಣಯ:</u>-** **ದಿನಾಂಕ: 08-05-2012 ರ ಮಾನ್ಯ ವಿಶೇಷ ಆಯುಕ್ತರು(ಯೋಜನೆ)ರವರ ಟಿಪ್ಪಣಿಯನ್ನು ಒಪ್ಪುತ್ತಾ, ಕೂಡಲೇ ಟೆಂಡರ್ ಕರೆದು, ಟೆಂಡರ್ ಕಡತವನ್ನು ಸಮಿತಿಯ ಅನುಮೋದನೆಗೆ ಮಂಡಿಸಲು ಸಮಿತಿಯು ತೀರ್ಮಾನಿಸಿತು.**

### 3. <u>ವಿಷಯ ಸಂಖ್ಯೆ:ತೋ/ಸ್ಥಾ/ಸ/12/12-13, ದಿನಾಂಕ: 28-05-2012</u>

ತೋಟಗಾರಿಕೆ ಇಲಾಖೆ, ಪೂರ್ವ ವಿಭಾಗದ ವ್ಯಾಪ್ತಿಗೆ ಒಳಪಡತಕ್ಕ ವಾರ್ಡ್ ಸಂಖ್ಯೆ.80ರ ಕೆ.ಎಫ್.ಸಿ. ಎದುರುಗಡೆ 100 ಅಡಿಗಳ ಸಿ.ಎಂ.ಹೆಚ್.ರಸ್ತೆ ಇಂದಿರಾನಗರ ಉದ್ಯಾನವನವನ್ನು ದತ್ತಿನ ಆಧಾರದ ಮೇಲೆ ನಿರ್ವಹಣೆ ಮಾಡಲು ಅನುಮತಿ ಕೋರಿ, ಮಾನ್ಯ ಶಾಸಕರು ಸಿ.ವಿ.ರಾಮನ್‌ನಗರ ವಿಧಾನಸಭಾ ಕ್ಷೇತ್ರ ಮತ್ತು ಸ್ಥಳೀಯ ಪಾಲಿಕೆಯ ಸದಸ್ಯರು ದಿನಾಂಕ:11-02-2012ರ ಪತ್ರದ ಮೂಲಕ ಶಿಫಾರಸ್ಸು ಮಾಡಿರುತ್ತಾರೆ. ಮೆ॥ ಕಾರ್ನರ್ ಸ್ಟೋನ್ ಪ್ರಾಪರ್ಟೀಸ್ ಪ್ರೈವೇಟ್ ಲಿಮಿಟೆಡ್ ಕಂಪನಿ, ನಂ.583, 9ನೇ ಮುಖ್ಯರಸ್ತೆ, ಸಿ.ಎಂ.ಹೆಚ್ ರಸ್ತೆ, ಇಂದಿರಾನಗರ, 1ನೇ ಹಂತ, ಬೆಂಗಳೂರು-38 ರವರಿಗೆ ಪಾಲಿಕೆ ನಿಯಮಾವಳಿಗಳ ರೀತ್ಯಾ ಉದ್ಯಾನವನವನ್ನು ದತ್ತಿನ ಆಧಾರದ ಮೇಲೆ ನಿರ್ವಹಣೆ ಮಾಡಲು ಹನ್ನೊಂದು

ಮುಂದುವರೆದಿದೆ. . . . .

ತಿಂಗಳ ಅವಧಿಗೆ ಅನುಮತಿ ನೀಡುವ ಬಗ್ಗೆ, ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಅನುಮೋದನೆ ಕೋರಿ ಮಂಡಿಸಲಾದ ಮಾನ್ಯ ಆಯುಕ್ತರ ದಿನಾಂಕ: 23–05–2012 ರ ಟಿಪ್ಪಣಿ.

<u>ನಿರ್ಣಯ:–</u> **ದಿನಾಂಕ: 23–05–2012 ರ ಮಾನ್ಯ ಆಯುಕ್ತರ ಟಿಪ್ಪಣಿಯನ್ನು ಒಪ್ಪುತ್ತಾ, ಸದರಿ ಉದ್ಯಾನವನದಲ್ಲಿ ಯಾವುದೇ ರೀತಿಯ ಜಾಹೀರಾತು ಫಲಕವನ್ನು ಪ್ರಕಟಿಸಿದ್ದಲ್ಲಿ, ಜಾಹೀರಾತು ಶುಲ್ಕವನ್ನು ಪಾಲಿಕೆಗೆ ಪಾವತಿಸಿಕೊಂಡು, ಸದರಿ ಸಂಸ್ಥೆಯವರಿಗೆ ಉದ್ಯಾನವನವನ್ನು ಅಭಿವೃದ್ಧಿ ಮತ್ತು ನಿರ್ವಹಣೆಗೆ ನೀಡಲು ಸಮಿತಿಯು ತೀರ್ಮಾನಿಸಿತು.**

4. <u>ವಿಷಯ ಸಂಖ್ಯೆ:ತೋ/ಸ್ಥಾ/ಸ/13/12–13, ದಿನಾಂಕ: 04–06–2012</u>

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ, ರಾಜರಾಜೇಶ್ವರಿ ನಗರ ವಲಯ ವ್ಯಾಪ್ತಿಯಲ್ಲಿನ ಉತ್ತರಹಳ್ಳಿ ಕೆರೆಯ ಅಭಿವೃದ್ಧಿಯನ್ನು ಕೈಗೊಳ್ಳಲು ವಿವರವಾದ ಯೋಜನಾ ವರದಿಯನ್ನು (Detailed Project Report) ಮೆ॥ ದಿ ಡಿಸೈನರ್ಸ್‌ರವರು ತಯಾರಿಸಿದ್ದು, ಅದರಂತೆ ಕೆರೆಯ ಸಮಗ್ರ ಅಭಿವೃದ್ಧಿ ಕಾಮಗಾರಿಯನ್ನು ವಿವಿಧ ಹಂತ–1 ಮತ್ತು ಹಂತ–2 ರಲ್ಲಿ ಕೈಗೆತ್ತಿಕೊಂಡು ಪೂರ್ಣಗೊಳಿಸಲಾಗಿದೆ. ಉಳಿದ ಈ ಕೆಳಕಂಡ ಕಾಮಗಾರಿಗಳಾದ:–

1) **ಶೌಚಾಲಯ ನಿರ್ಮಾಣ.**
2) **ಕೆರೆಯ ಸುತ್ತ ಹಾಲಿ ಇರುವ ತಂತಿ ಬೇಲಿಯು ಶಿಥಿಲಗೊಂಡಿದ್ದು, ನಗರ ಪಾಲಿಕೆ ಸದಸ್ಯರು ಸ್ಥಳದಲ್ಲಿ ನೀಡಿದ ಸೂಚನೆಯಂತೆ ಪುನರ್ ನಿರ್ಮಿಸುವುದು.**
3) **ಕೆರೆಯ ಪೂರ್ವ ಹಾಗೂ ಉತ್ತರ ಈಗಾಗಲೇ ವಸತಿ ಪ್ರದೇಶಗಳು ಅಭಿವೃದ್ಧಿಯಾಗಿರುವುದರಿಂದ ತಡೆಗೋಡೆ ನಿರ್ಮಿಸಲು ಯೋಜಿಸಲಾಗಿದೆ.**
4) **ಕೆರೆಯಲ್ಲಿ STP ನಿರ್ಮಾಣವಾಗುತ್ತಿದ್ದು, ಹಾಲಿ ಇರುವ ಚರಂಡಿಯಿಂದ ನೀರು STP ಗೆ ಬರಲು ಅನುಕೂಲವಾಗುವಂತೆ ಚರಂಡಿ ನಿರ್ಮಿಸುವುದು, ವಿದ್ಯುತ್ ಒದಗಿಸುವುದು.**
5) **ಹಾಲಿ ಇರುವ ಗಿಡಗಳನ್ನು ನಿರ್ವಹಣೆ ಮಾಡುವುದು.**
6) **ಡೆಸ್ಟ್‌ಬಿನ್, ಬೆಂಚಸ್‌ಗಳನ್ನು ಹಾಗೂ Signage ಗಳನ್ನು ಅಳವಡಿಸುವುದು.**
7) **Screen Barrier ಅಳವಡಿಸುವುದು.**
8) **ಉಸ್ತುವಾರಿ ಸಲಹೆಗಾರರನ್ನು ನೇಮಿಸುವುದು ಹಾಗೂ ಟೋಟಲ್ ಸ್ಟೇಷನ್ ಸರ್ವೆ ಮಾಡಿಸುವುದು.**

ಇತ್ಯಾದಿ ಒಳಗೊಂಡಂತೆ, ಅಂದಾಜುಪಟ್ಟಿಯನ್ನು 2011–12ನೇ ಸಾಲಿನ ಲೋಕೋಪಯೋಗಿ ದರಪಟ್ಟಿ ಹಾಗೂ ಅನುಮೋದನೆಗೊಂಡ ಡೇಟಾ ದರಗಳಂತೆ ತಯಾರಿಸಲಾಗಿದ್ದು, ಅಂದಾಜು ಮೊತ್ತ ರೂ.100.00 ಲಕ್ಷಗಳಾಗಿರುತ್ತದೆ. ಈ ಕಾಮಗಾರಿಯು 2011–12ನೇ ಸಾಲಿನ ಆಯವ್ಯಯದ ಪುಟ ಸಂಖ್ಯೆ.**72,** ಪಿ.ಕೋಡ್ ಸಂಖ್ಯೆ: ಪಿ–**2100** ರಲ್ಲಿ ಉತ್ತರಹಳ್ಳಿ ಕೆರೆಯ ಚಾಲ್ತಿ ಕಾಮಗಾರಿಗಳಿಗಾಗಿ ರೂ.100.00 ಲಕ್ಷಗಳನ್ನು ನಿಗಧಿಪಡಿಸಿದ್ದು, ಈ ಅನುದಾನದಲ್ಲಿ ಭರಿಸಬಹುದಾಗಿರುತ್ತದೆ.

ಮುಂದುವರೆದಿದೆ. . . . .

ಈ ಹಿನ್ನೆಲೆಯಲ್ಲಿ ಉತ್ತರಹಳ್ಳಿ ಕೆರೆಯ ಸಮಗ್ರ ಅಭಿವೃದ್ಧಿ ಕಾಮಗಾರಿ ಹಂತ–3 ರ ಕಾಮಗಾರಿಯ ಅಂದಾಜು ಮೊತ್ತ ರೂ.100.00ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆ ಹಾಗೂ ಮೇಲ್ಕಂಡ ಅಂಶಗಳಿಗೆ ಅನುಮೋದನೆ ಕೋರಿ ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಮಾನ್ಯ ವಿಶೇಷ ಆಯುಕ್ತರು(ಯೋಜನೆ) ರವರ ದಿನಾಂಕ: 02–06–2012 ರ ಟಿಪ್ಪಣಿ.

**ನಿರ್ಣಯ:–** **ದಿನಾಂಕ:02–06–2012 ರ ಮಾನ್ಯ ವಿಶೇಷ ಆಯುಕ್ತರು(ಯೋಜನೆ)ರವರ ಟಿಪ್ಪಣಿಯನ್ನು ಸಮಿತಿಯು ಒಪ್ಪಿದೆ.**

**5. ವಿಷಯ ಸಂಖ್ಯೆ:ತೋ/ಸ್ಥಾ/ಸ/14/12–13, ದಿನಾಂಕ: 04–06–2012**

ವಾರ್ಡ್ ನಂ.35 ರ ಸ್ಯಾಂಕಿ ಕೆರೆ ಉದ್ಯಾನವನದಲ್ಲಿ ಫಿಟ್‌ನೆಸ್ ಎಕ್ಯೂಪ್‌ಮೆಂಟ್ ಅಳವಡಿಸಲು ***RMZ Corp.*** *ಸಂಸ್ಥೆ*ರವರಿಗೆ ದಿನಾಂಕ:22–03–2012 ರಂದು ತೋಟಗಾರಿಕೆ ಸ್ಥಾಯಿ ಸಮಿತಿಯಲ್ಲಿ ನಿರ್ಣಯ ಕೈಗೊಂಡು ಆದೇಶ ನೀಡಲಾಗಿರುತ್ತದೆ. ಈ ಕೆಲಸವನ್ನು ಸ್ಯಾಂಕಿಕೆರೆ ಬದಲಾಗಿ, ಇದೇ ವಾರ್ಡ್‌ನ ಲೋ ಲೆವೆಲ್ ಉದ್ಯಾನವನದಲ್ಲಿ ಅಳವಡಿಸಲು ಸ್ಥಳ ಬದಲಾವಣೆ ಮಾಡಲು ಸದರಿ ಸಂಸ್ಥೆಯವರು ಕೋರಿರುವ ಹಿನ್ನೆಲೆಯಲ್ಲಿ ಹಾಗೂ ಆ ವಿಭಾಗದ ನಗರ ಪಾಲಿಕೆ ಸದಸ್ಯರೂ ಸಹ ಈ ಬದಲಾಔಣೆ ಕೆಲಸಕ್ಕೆ ಅನುಮತಿ ನೀಡಿರುವಂತೆ ಪತ್ರ ನೀಡಿದ್ದು, ಮಾನ್ಯ ಆಯುಕ್ತರವರು ತೋಟಗಾರಿಕೆ ಸ್ಥಾಯಿ ಸಮಿತಿಯ ಅನುಮೋದನೆ ನಿರೀಕ್ಷಿಸಿ ಅನುಮತಿ ನೀಡಿರುವುದರಿಂದ ***RMZ Corp.*** ಸಂಸ್ಥೆರವರಿಗೆ *ಫಿಟ್ ನೆಸ್ ಎಕ್ಯೂಪ್‌ಮೆಂಟ್ ಸ್ಯಾಂಕಿಕೆರೆಯ ಲೋ ಲೆವೆಲ್ ಉದ್ಯಾನವನದಲ್ಲಿ ಅಳವಡಿಸಲು* ತೋಟಗಾರಿಕೆ ಸ್ಥಾಯಿ ಸಮಿತಿಯ ಅನುಮೋದನೆ ಪಡೆಯಲು ಟಿಪ್ಪಣಿ ಮಂಡಿಸಲು ಈ ಕೆಳಕಂಡ ಪಾಲಿಕೆಯ ಷರತ್ತುಗಳನ್ನು ವಿಧಿಸಲಾಗಿದೆ.

1. *ಲೋ ಲೆವೆಲ್ ಉದ್ಯಾನವನದ* ಹಕ್ಕು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿರುತ್ತದೆ.
2. ವಿವಿಧ ನಮೂನೆಯ 10 ವ್ಯಾಯಾಮ ಉಪಕರಣಗಳನ್ನು ಅಳವಡಿಸುವಾಗ *ಲೋ ಲೆವೆಲ್ ಉದ್ಯಾನವನದ* ಸ್ವತ್ತಿಗೆ ಯಾವುದೇ ಹಾನಿಯಾಗದಂತೆ ಹಾಗೂ ಸಾರ್ವಜನಿಕರಿಗೆ ತೊಂದರೆಯಾಗದಂತೆ ನಿರ್ವಹಣೆ ಮಾಡಬೇಕಿರುತ್ತದೆ.
3. ಈ ಉದ್ಯಾನವನದಲ್ಲಿ ರಬ್ಬರ್ ನೆಲಹಾಸನ್ನು ಹಾಕಿ ***"RMZ fitness park"*** ಎಂದು ಅನುಮೋದನೆ ನೀಡಬಹುದಾಗಿದೆ.
4. ಅಳವಡಿಸಿದ ವ್ಯಾಯಾಮ ಉಪಕರಣಗಳ ನಿರ್ವಹಣೆ ಮತ್ತು ಮೇಲ್ವಿಚಾರಣೆ RMZ Corp. ಸಂಸ್ಥೆಯವರದ್ದಾಗಿರುತ್ತದೆ.
5. RMZ Corp. ಸಂಸ್ಥೆಯವರು ಅಳವಡಿಸಿದ ವ್ಯಾಯಾಮ ಉಪಕರಣಗಳನ್ನು ಉಪಯೋಗಿಸುವ ಸೂಚನೆಗಳ ನಾಮಫಲಕ ಅಳವಡಿಸಿ ಹಾಗೂ ಇದನ್ನು ಸಾರ್ವಜನಿಕರಿಗೆ ಉಚಿತವಾಗಿ ಉಪಯೋಗಿಸಲು ಅನುಕೂಲ ಮಾಡಿಕೊಟ್ಟು ಹಾಗೂ ಉಪಯೋಗಿಸುವ ಸಮಯದಲ್ಲಿ ಸಾರ್ವಜನಿಕರಿಗೆ ಯಾವುದೇ ತರದ ಹಾನಿಯಾಗದಂತೆ ಎಚ್ಚರವಹಿಸಬೇಕಾಗಿರುತ್ತದೆ.

ಮುಂದುವರೆದಿದೆ. . . . .

6. ಅಳವಡಿಸಿದ ವ್ಯಾಯಾಮ ಉಪಕರಣಗಳ ಸ್ಥಳದಲ್ಲಿ ಯಾವುದೇ ತರದ ಛಾವಣಿಯನ್ನು ಅಳವಡಿಸಬಾರದು ಹಾಗೂ Pergola ಅಳವಡಿಸಲು ಅನುಮೋದನೆ ನೀಡಲಾಗಿದೆ.

7. *ಲೋ ಲೆವೆಲ್ ಉದ್ಯಾನವನವನ್ನು* ***"RMZ fitness park"*** ಅನ್ನು ಮೂರು ವರ್ಷದವರೆಗೆ ನಿರ್ವಹಣೆ ಮಾಡಲು ತದನಂತರ, ನಿರ್ವಹಣೆಯನ್ನು ಮುಂದುವರೆಸಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮತ್ತು RMZ Corp. ಸಂಸ್ಥೆಯವರು ಪರಸ್ಪರ ಒಪ್ಪಂದದ ಮೇರೆಗೆ ಮುಂದುವರೆಸಬಹುದು.

8. ಅಭಿವೃದ್ಧಿಪಡಿಸಬೇಕಾಗಿರುವ/ನಿರ್ವಹಿಸಬೇಕಾಗಿರುವ/ವಿದ್ಯುತ್‌ಚಕ್ತಿ/ನೀರು ಸರಬರಾಜು ಕೆಲಸದ ಬಗ್ಗೆ ಸೂಕ್ತ ರೂಪು–ರೇಷೆಗಳನ್ನು ಸಿದ್ದಪಡಿಸಿ, ಪಾಲಿಕೆಯ ಸಕ್ಷಮ ಪ್ರಾಧಿಕಾರಿಗಳು ನಿರ್ಧರಿಸಿದಂತೆ ನಿರ್ವಹಿಸಬೇಕಾಗಿರುತ್ತದೆ.

9. ಸರಿಯಾಗಿ ನಿರ್ವಹಣೆ ಮಾಡಿಲ್ಲದ ಸಮಯದಲ್ಲಿ ಹಾಗೂ ಯಾವುದೇ ಲೋಪವೆಸಗಿದಾಗ RMZ Corp. ಸಂಸ್ಥೆಯವರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಿಗಳ ಜೊತೆಗೆ ಜಂಟಿ ತಪಾಸಣೆಯನ್ನು ಮಾಡಿ, ಆಗ ನೀಡಿದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಿಗಳ ಸೂಚನೆಗಳನ್ನು ಅಳವಡಿಸಿಕೊಳ್ಳಬೇಕಾಗಿರುತ್ತದೆ.

10. ನಿರ್ವಹಣೆ ಅವಧಿ ಮುಗಿದ ಮೇಲೆ ಹಕ್ಕು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿರುತ್ತದೆ.

11. ನಿರ್ವಹಣೆ ಅವಧಿ ಮುಗಿದ ಮೇಲೆ ಉದ್ಯಾನವನದಲ್ಲಿ ಅಳವಡಿಸಿದ ವ್ಯಾಯಾಮ ಉಪಕರಣಗಳು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸ್ವತ್ತಾಗಿರುತ್ತದೆ.

12. ನಿರ್ವಹಣೆ ಮಾಡುವ ಹಕ್ಕನ್ನು ಬೇರೆ ಸಂಸ್ಥೆಗಳಿಗೆ ಹಸ್ತಾಂತರಿಸಬಾರದು.

13. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಯಾವುದೇ ವೇಳೆಯಲ್ಲಿ ನೀಡಿದ ಅನುಮತಿಯನ್ನು ಯಾವುದೇ ಕಾರಣ ನೀಡದೆ ರದ್ದುಪಡಿಸುವ ಹಕ್ಕನ್ನು ಹೊಂದಿರುತ್ತದೆ.

14. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯೇ BESCOM ಹಾಗೂ BWSSB ಶುಲ್ಕವನ್ನು ಪಾವತಿಸುತ್ತದೆ.

15. RMZ Corp. ಸಂಸ್ಥೆಯವರ ಪ್ರಾಯೋಜಕರ ಪ್ರದರ್ಶನ ನಾಮಫಲಕವು 1.5X0.5 ಅಡಿಯ ಅಳತೆಗಿಂತ ಹೆಚ್ಚಿರಬಾರದು. ಪ್ರಾಯೋಜಕ ಸಂಸ್ಥೆಯ ನಾಮಫಲಕ ಹಾಗೂ ಲೋಗೋ ಪ್ರದರ್ಶನ ಸ್ಥಳವನ್ನು ಆಯುಕ್ತರು ಅಥವಾ ಅವರಿಂದ ಅಧಿಕಾರ ಪಡೆದ ಅಧಿಕಾರಿಗಳಿಂದ ಅನುಮತಿ ಪಡೆಯಬೇಕು.

16. RMZ Corp. ಸಂಸ್ಥೆಯವರು ಮಹಾನಗರ ಪಾಲಿಕೆ/ ಲಾಂಛನವನ್ನು ಕನ್ನಡ ಮತ್ತು ಅಂಗ್ಲ ಭಾಷೆಯಲ್ಲಿ ಪ್ರಮುಖ ಸ್ಥಳದಲ್ಲಿ ಪ್ರದರ್ಶಿಸತಕ್ಕದ್ದು.

ಮುಂದುವರೆದಿದೆ. . . . .

ಆದುದರಿಂದ, ಸದರಿ ಸಂಸ್ಥೆ ಯಾವುದೇ ಆರ್ಥಿಕ ಪ್ರತಿಫಲಪೇಕ್ಷೆಯನ್ನು ಹೊಂದಿರುವುದಿಲ್ಲವಾದ್ದರಿಂದ RMZ Corp. ಸಂಸ್ಥೆಗೆ ಮೇಲಿನ ಷರತ್ತುಗಳೊಂದಿಗೆ ಘಟನೋತ್ತರ ಅನುಮೋದನೆಯನ್ನು ನೀಡಲಾಗಿದ್ದು, ಸದರಿ ಅನುಮೋದನೆಯನ್ನು ಅಂಗೀಕರಿಸಲು ಕೋರಿ ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಮಾನ್ಯ ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 02-06-2012 ರ ಟಿಪ್ಪಣಿ.

**<u>ನಿರ್ಣಯ:-</u> ದಿನಾಂಕ: 02-06-2012 ರ ಮಾನ್ಯ ವಿಶೇಷ ಆಯುಕ್ತರು(ಯೋಜನೆ)ರವರ ಟಿಪ್ಪಣಿಯನ್ನು ಸಮಿತಿಯು ಒಪ್ಪುತ್ತಾ, ಸದರಿ ಉದ್ಯಾನವನದಲ್ಲಿ ಯಾವುದೇ ರೀತಿಯ ಜಾಹೀರಾತು ಫಲಕವನ್ನು ಪ್ರಕಟಿಸಿದ್ದಲ್ಲಿ, ಜಾಹೀರಾತು ಶುಲ್ಕವನ್ನು ಪಾಲಿಕೆಗೆ ಪಾವತಿಸಿಕೊಂಡು, ಸದರಿ ಸಂಸ್ಥೆಯವರಿಗೆ ಉದ್ಯಾನವನವನ್ನು ಅಭಿವೃದ್ಧಿ ಮತ್ತು ನಿರ್ವಹಣೆಗೆ ನೀಡಲು ಸಮಿತಿಯು ತೀರ್ಮಾನಿಸಿತು.**

6. **<u>ವಿಷಯ ಸಂಖ್ಯೆ:ತೋ/ಸ್ಥಾ/ಸ/15/12-13, ದಿನಾಂಕ: 06-06-2012</u>**

ತೋಟಗಾರಿಕೆ ಇಲಾಖೆ, ಪೂರ್ವ ವಿಭಾಗದ ವ್ಯಾಪ್ತಿಗೆ ಒಳಪಡುವ ವಾರ್ಡ್ ಸಂಖ್ಯೆ.111ರ ರೆಸ್ಟ್‌ಹೌಸ್ ಉದ್ಯಾನವನವನ್ನು ದತ್ತಿನ ಆಧಾರದ ಮೇಲೆ ನಿರ್ವಹಣೆ ಮಾಡಲು M/s Puravankara Project Limited. ಬೆಂಗಳೂರು ರವರಿಗೆ ಹನ್ನೊಂದು ತಿಂಗಳ ಅವಧಿಗೆ ಅನುಮತಿ ನೀಡಲಾಗಿದ್ದು, ನಿರ್ವಹಣಾ ಅವಧಿಯು ದಿನಾಂಕ:06-12-2011 ಕ್ಕೆ ಮುಕ್ತಾಯಗೊಂಡಿದೆ. ಸದರಿ ಸಂಸ್ಥೆಯವರು ನಿರ್ವಹಣಾ ಅವಧಿಯನ್ನು ಮೂರು ವರ್ಷಗಳ ಅವಧಿಗೆ ನವೀಕರಿಸಲು ಕೋರಿ ದಿನಾಂಕ:31-03-2012 ರಂದು ಮನವಿ ಸಲ್ಲಿಸಿರುತ್ತಾರೆ. ಈ ಸಂಸ್ಥೆಯವರು ಸದರಿ ಉದ್ಯಾನವನವನ್ನು ಮೇಲ್ಕಂಡ ಅವಧಿಯಲ್ಲಿ ನಿಯಮ ನಿಬಂಧನೆಗಳ ರೀತ್ಯಾ, ತೃಪ್ತಿಕರವಾಗಿ ನಿರ್ವಹಣೆ ಮಾಡಿರುತ್ತಾರೆ. ಆದುದರಿಂದ, ಪಾಲಿಕೆಯ ನಿಯಮಗಳ ರೀತ್ಯಾ ನಿರ್ವಹಣಾ ದತ್ತಿನ ಅವಧಿಯನ್ನು ಮೂರು ವರ್ಷಗಳಿಗೆ ನವೀಕರಿಸಲು ಅನುಮತಿ ನೀಡುವ ಕುರಿತು, ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಅನುಮೋದನೆ ಕೋರಿ ಮಂಡಿಸಲಾದ ಮಾನ್ಯ ಆಯುಕ್ತರ ದಿನಾಂಕ: 14-05-2012 ರ ಟಿಪ್ಪಣಿ.

**<u>ನಿರ್ಣಯ</u>:- ಸ್ಥಳ ಪರಿಶೀಲನೆಗೆ ಮುಂದೂಡಲಾಗಿದೆ**

7. **<u>ವಿಷಯ ಸಂಖ್ಯೆ:ತೋ/ಸ್ಥಾ/ಸ/16/12-13, ದಿನಾಂಕ: 11-06-2012</u>**

ಜಯನಗರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ, ವಾರ್ಡ್ ಸಂಖ್ಯೆ.178 ರಲ್ಲಿ, Providing malty specialty play equipments in park behind Kasha Vishwanatha Temple, J.P.nagara, 6th stage, Sarakki in Ward No.178, (Est. Cost Rs.27.00 Lakshs) ಕಾಮಗಾರಿಯನ್ನು ತುರ್ತಾಗಿ ಕೈಗೊಳ್ಳಲು ಪೂಜ್ಯ ಮಹಾಪೌರರು ಸೂಚಿಸಿರುವ ಮೇರೆಗೆ ಸದರಿ ಕಾಮಗಾರಿಗೆ 2010-11ನೇ ಸಾಲಿನ ದರಪಟ್ಟಿ ಆಧಾರದ ಮೇಲೆ ಅಂದಾಜು ಪಟ್ಟಿಯನ್ನು ತಯಾರಿಸಿ ಆಡಳಿತಾತ್ಮಕ ಹಾಗೂ ತಾಂತ್ರಿಕ ಅನುಮೋದನೆಯನ್ನು ಪಡೆದು, ಸದರಿ ಕಾಮಗಾರಿಯನ್ನು ಕೆ.ಆರ್.ಐ.ಡಿ.ಎಲ್. ಸಂಸ್ಥೆಯ ವತಿಯಿಂದ ನಿರ್ವಹಿಸಲಾಗಿರುತ್ತದೆ. ಕಾಮಗಾರಿಯನ್ನು ನಿರ್ವಹಿಸಿರುವ ಬಗ್ಗೆ ಛಾಯಾ ಚಿತ್ರಗಳನ್ನು ಕಡತದಲ್ಲಿ ಲಗತ್ತಿಸಿದೆ.

ಮುಂದುವರೆದಿದೆ. . . . .

ಮುಂದುವರೆದಂತೆ, ಅಧ್ಯಕ್ಷರು, ವಾರ್ಡ್ ಮಟ್ಟದ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿರವರ ಪತ್ರ ಸಂಖ್ಯೆ.ವಾಕಾಸ್ಥಾಸ/ಪಿ.ಆರ್/93/2011–12, ದಿ:23–11–2011 ರಂತೆ ಸದರಿ ಕಾಮಗಾರಿಗೆ ಸಮಿತಿಯ ಅನುಮೋದನೆಯನ್ನು ಪಡೆಯಬೇಕಾಗಿದ್ದು, ಕಾಮಗಾರಿಯನ್ನು ಕೈಗೊಂಡು ನಿರ್ವಹಿಸಿರುವ ಕ್ರಮವನ್ನು ಸ್ಥಿರೀಕರಿಸಲು ಕೋರಿ, ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಅಪರ ಆಯುಕ್ತರು (ಯೋಜನೆ)ರವರ ದಿನಾಂಕ:06–06–2012 ರ ಟಿಪ್ಪಣಿ.

**ನಿರ್ಣಯ:– ದಿನಾಂಕ:06–06–2012ರ ಮಾನ್ಯ ಅಪರ ಆಯುಕ್ತರು(ಯೋಜನೆ)ರವರ ಟಿಪ್ಪಣಿಯನ್ನು ಒಪ್ಪಿದೆ.**

ಕೊನೆಯದಾಗಿ, ಈ ಸಭೆಯಲ್ಲಿ ಮೇಲಿನ ವಿಷಯದ ಬಗ್ಗೆ ಚರ್ಚಿಸುವಾಗ ಅಧಿಕಾರಿಗಳ ಸಲಹೆ ಹಾಗೂ ಸಮಿತಿಯ ಸದಸ್ಯರ ಸಲಹೆಗಳನ್ನು ಪಾಲಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಕ್ರಮವಹಿಸುವಂತೆ ಸುತ್ತೋಲೆ ಹೊರಡಿಸಿ ಕಾರ್ಯಪ್ರವೃತ್ತರಾಗಬೇಕೆಂದು ಮಾನ್ಯ ಆಯುಕ್ತರನ್ನು ಕೋರುತ್ತಾ, ವಂದನೆಗಳೊಂದಿಗೆ ಸಭೆಯು ಮುಕ್ತಾಯಗೊಂಡಿತು.

ಅಧ್ಯಕ್ಷರು
ತೋಟಗಾರಿಕೆ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಪ್ರತಿಯನ್ನು:–**

- ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸುತ್ತಾ, ವಿಷಯವನ್ನು ಪೂಜ್ಯ ಮಹಾಪೌರರ ಅವಗಾಹನೆಗೆ ತರಲು ಕೋರಿದೆ.
- ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸುತ್ತಾ, ವಿಷಯವನ್ನು ಮಾನ್ಯ ಉಪ ಮಹಾಪೌರರ ಅವಗಾಹನೆಗೆ ತರಲು ಕೋರಿದೆ.
- ಆಡಳಿತ ಪಕ್ಷ / ವಿರೋಧ ಪಕ್ಷ ಮತ್ತು ಜೆಡಿಎಸ್ ಪಕ್ಷದ ನಾಯಕರುಗಳಿಗೆ ಕಳುಹಿಸಿದೆ.
- ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸುತ್ತಾ, ವಿಷಯವನ್ನು ಮಾನ್ಯ ಆಯುಕ್ತರವರ ಅವಗಾಹನೆಗೆ ತರಲು ಕೋರಿದೆ.
- *ವಿಶೇಷ ಆಯುಕ್ತರು(ಯೋಜನೆ) ರವರ ಗಮನಕ್ಕೆ ತರಲಾಗಿದೆ.*
- *ಅಪರ ಆಯುಕ್ತರು(ಯೋಜನೆ)ರವರ ಗಮನಕ್ಕೆ ತರಲಾಗಿದೆ.*
- ಎಲ್ಲಾ ಸ್ಥಾಯಿ ಸಮಿತಿ ಅಧ್ಯಕ್ಷರುಗಳಿಗೆ ಕಳುಹಿಸಲಾಗಿದೆ.
- ಪ್ರಧಾನ ಅಭಿಯಂತರವರಿಗೆ ಕಳುಹಿಸಲಾಗಿದೆ.
- ಮುಖ್ಯ ಲೆಕ್ಕಾಧಿಕಾರಿಗಳಿಗೆ ಕಳುಹಿಸಲಾಗಿದೆ.
- ಉಪ /ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು(ಉತ್ತರ–ದಕ್ಷಿಣ) ರವರಿಗೆ ಕಳುಹಿಸಲಾಗಿದೆ.
- ಕಾ.ಪಾ.ಅ.(ಕೆರೆಗಳು–ಪರಿಸರ ಕೋಶ 1, 2, 3, 4, 5,) ರವರಿಗೆ ಕಳುಹಿಸಲಾಗಿದೆ.
- ಸಹಾಯಕ ಕಾರ್ಯಪಾಲಕ ಅಭಿಯಂತರರು(ಜಾಹೀರಾತು)ರವರಿಗೆ ಕಳುಹಿಸಲಾಗಿದೆ.
- ತೋಟಗಾರಿಕೆ ಅಧೀಕ್ಷಕರು (ಪೂರ್ವ/ ಪಶ್ಚಿಮ/ ದಕ್ಷಿಣ/ ರಾಜರಾಜೇಶ್ವರಿನಗರ/ ದಾಸರಹಳ್ಳಿ/ ಬೊಮ್ಮನಹಳ್ಳಿ/ ಯಲಹಂಕ/ ಮಹದೇವಪುರ) ರವರಿಗೆ ಕಳುಹಿಸಲಾಗಿದೆ.
- ಕಛೇರಿ ಪ್ರತಿ.

ಮುಂದುವರೆದಿದೆ. . . . .